ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 15/12/20

# ಅವಿಶ್ವಾಸಕ್ಕಾಗಿ ಪರಿಷತ್ ಫೈಟ್

## ಇಂದು ವಿಧಾನಪರಿಷತ್ ಕಲಾಪ

**ಬೆಂಗಳೂರು:** ಮಂಗಳವಾರ ನಿಗದಿಯಾಗಿರುವ ಒಂದು ದಿನದ ವಿಧಾನಪರಿಷತ್ ಕಲಾಪದತ್ತ ಎಲ್ಲರ ಚಿತ್ತ ನೆಟ್ಟಿದ್ದು, ಸಭಾಪತಿ ಅವಿಶ್ವಾಸ ವಿಷಯ ಪ್ರಮುಖವಾಗಿ ಪ್ರಸ್ತಾಪಗೊಂಡು ಸದನದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಕೋಲಾಹಲ ಉಂಟಾಗುವ ನಿರೀಕ್ಷೆಯಿದೆ.

ಕಲಾಪದ ಕಾರ್ಯಸೂಚಿಯಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ಚರ್ಚೆ ವಿಚಾರ ಸೇರಿಸದ ಕಾರಣ ಮತ್ತೊಮ್ಮೆ ಕಲಾಪ ಸಲಹಾ ಸಮಿತಿ ಸಭೆ ನಡೆಸುವಂತೆ ಬಿಜೆಪಿ ಮನವಿ ಮಾಡಿದೆ. ಮತ್ತೊಂದೆಡೆ ಸಭಾಪತಿಯವರು ವಿಶ್ವಾಸ ಕಳೆದುಕೊಂಡಿರುವುದರಿಂದ ಕಲಾಪವನ್ನು ಉಪ ಸಭಾಪತಿ ನಡೆಸಬೇಕು ಎಂದು ಬಿಜೆಪಿ ಪಟ್ಟು ಹಿಡಿದಿದೆ.

ಕಾರ್ಯಸೂಚಿಯಲ್ಲಿ ಅವಿಶ್ವಾಸ ಇರದ ಹಾಗೂ ಈ ಹಿಂದೆಯೇ ಸಭಾಪತಿಯವರು ಅವಿಶ್ವಾಸ ನಿರ್ಣಯ ನಿಯಮಾವಳಿ ಪ್ರಕಾರ ಇಲ್ಲ ಎಂದು ತಿರಸ್ಕರಿಸಿರುವುದರಿಂದ ಮತ್ತೆ ಅದನ್ನು ಪ್ರಸ್ತಾಪಿಸುವಂತಿಲ್ಲ. ಒಂದೊಮ್ಮೆ ಪ್ರಸ್ತಾಪಿಸಿದರೆ ವಿರೋಧಿಸಲು ಕಾಂಗ್ರೆಸ್ ತೀರ್ಮಾನ ಮಾಡಿದೆ. ಇದರ ನಡುವೆ ಜೆಡಿಎಸ್ ಯಾವ ನಿಲುವು ತೆಗೆದುಕೊಳ್ಳಲಿದೆ ಎಂಬುದರ ಗುಟ್ಟು ಬಿಟ್ಟುಕೊಟ್ಟಿಲ್ಲ, ಮೂರೂ ಪಕ್ಷಗಳು ತನ್ನ ಸದಸ್ಯರಿಗೆ ವಿಪ್ ನೀಡಿವೆ.

ಗೋಹತ್ಯೆ ನಿಷೇಧ ವಿಧೇಯಕ ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆಯಾದರೂ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ವಿಚಾರವೇ ಪ್ರಮುಖವಾಗಿ ಪ್ರಸ್ತಾಪಗೊಳ್ಳಲಿದೆ.

ಒಂದು ದಿನದ ಅಧಿವೇಶನದ ಕಾರ್ಯಕಲಾಪದ ಕಾರ್ಯಸೂಚಿಯಲ್ಲಿ ಅವಿಶ್ವಾಸದ ಕಾರ್ಯಸೂಚಿಯನ್ನೇ ನೀಡಿಲ್ಲ. ಈ ಮೂಲಕ ಸಭಾಪತಿ ವಿರುದ್ಧ ಬಿಜೆಪಿ ಸದಸ್ಯರು ನೀಡಿದ್ದ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಗೆ ಅವಕಾಶ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ಸಭಾಪತಿ ರವಾನಿಸಿದ್ದಾರೆ.

**ಬಿಜೆಪಿ ತಂತ್ರಗಾರಿಕೆ:** ಸಭಾಪತಿಗಳ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯ ಸೂಚನೆ ಕುರಿತಂತೆ ಚರ್ಚಿಸಲು ಮಂಗಳವಾರ ಬೆಳಗ್ಗೆ ಕಲಾಪ ಸಲಹಾ ಸಮಿತಿ ಸಭೆ ನಡೆಸುವಂತೆ ಬಿಜೆಪಿ ಮನವಿ ಮಾಡಿದೆ. ಒಂದೊಮ್ಮೆ ಸಭೆ ನಡೆಸದಿದ್ದರೆ ಕಲಾಪಪಟ್ಟಿಯಲ್ಲಿ ಇಲ್ಲದಿದ್ದರೂ ಅವಿಶ್ವಾಸ ನಿರ್ಣಯ ಸೂಚನೆ ಮೇಲಿನ ಚರ್ಚೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿಯಲು ಬಿಜೆಪಿ ನಿರ್ಧರಿಸಿದೆ.

**ಕಾಂಗ್ರೆಸ್ ಪ್ರತಿತಂತ್ರ:** ಅವಿಶ್ವಾಸ ಪ್ರಸ್ತಾವವನ್ನು ಸಭಾಪತಿ ತಿರಸ್ಕರಿಸಿರುವುದರಿಂದ ಅದರ ಮಂಡನೆಗೆ ಅವಕಾಶ ನೀಡದಿರಲು ಕಾಂಗ್ರೆಸ್ ತೀರ್ಮಾನಿಸಿದೆ.

**ಜೆಡಿಎಸ್ ತಟಸ್ಥ?:** ಇಷ್ಟೆಲ್ಲಾ ಬೆಳವಣಿಗೆಗಳ ನಡುವೆ ಜೆಡಿಎಸ್ ನಡೆ ಏನು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಸದನದ ಬೆಳವಣಿಗೆ ನಂತರ ತೀರ್ಮಾನವಾಗಲಿದೆ.

**ಸದನ ಕರೆಯುವ ವಿಚಾರದಲ್ಲಿ ಆತುರ ಪಡಲಾಗಿದೆ. ಸಭಾಪತಿ ಅವಿಶ್ವಾಸ ನಿರ್ಣಯ ವಿಚಾರದಲ್ಲಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆ.**

**• ಎಚ್.ಡಿ. ಕುಮಾರಸ್ವಾಮಿ,** ಮಾಜಿ ಮುಖ್ಯಮಂತ್ರಿ

**ಅವಿಶ್ವಾಸ ನಿರ್ಣಯದ ವಿಚಾರದಲ್ಲಿ ಬೆಂಬಲಿಸುವಂತೆ ನಾವು ಜೆಡಿಎಸ್‌ಗೆ ಕೇಳಿಲ್ಲ. ನಮ್ಮ ಪಕ್ಷದ ವರಿಷ್ಠರು ಹಾಗೂ ಜೆಡಿಎಸ್ ವರಿಷ್ಠರು ಆ ವಿಚಾರ ಮಾತಾಡಿಕೊಳ್ಳುತ್ತಾರೆ.**

**• ಎಸ್. ಆರ್. ಪಾಟೀಲ್,** ಪರಿಷತ್ ಪ್ರತಿಪಕ್ಷದ ನಾಯಕ

**ಅವಿಶ್ವಾಸ ನಿರ್ಣಯ ಸೂಚನೆ ಸಲ್ಲಿಸಿ 14 ದಿನ ಕಳೆದ ಬಳಿಕ ಮಂಗಳವಾರಕ್ಕೆ 5 ದಿನ ಕಳೆಯಲಿದೆ. ಸಭಾಪತಿಗಳು ಈಗಾಗಲೇ ರಾಜೀನಾಮೆ ನೀಡಬೇಕಿತ್ತು. ಚರ್ಚೆಗೆ ಅವಕಾಶ ಕೋರಲಾಗುವುದು.**

**• ರವಿಕುಮಾರ್,** ಪರಿಷತ್ ಸದಸ್ಯ